ದಿನಾಂಕಃ 03/11/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ **08** ಮತ್ತು **13** ನೇ ಪ್ರತಿವಾದಿ ಪರ ಶ್ರೀ ಎಮ್ ಬಿ ಬಿ ವಕೀಲರಿಂದಃ

12. ಈ ದಾವಾ ಬರೆಯಲು ಮಾಹಿತಿಯನ್ನು ನಾನೇ ವಕೀಲರಿಗೆ ಕೊಟ್ಟಿರುತ್ತೇನೆ. ನಮ್ಮ ಕುಟುಂಬದ ಮೂಲ ಪುರುಷ ಫಕೀರಪ್ಪ. ಸದರಿ ಫಕೀರಪ್ಪನಿಗೆ ಒಟ್ಟು ಮೂರು ಜನ ಮಕ್ಕಳು. ಅವರೆಂದರೆ, ಈರಪ್ಪ, ಚಿನ್ನಪ್ಪ ಮತ್ತು ಪರಪ್ಪ. ವಂಶಾವಳಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಹಾಜರು ಪಡಿಸಿದ್ದೇನೆ. ಈರಪ್ಪನಿಗೆ ಇಬ್ಬರೂ ಹೆಣ್ಣು ಮಕ್ಕಳು. ಅವರೆಂದರೆ, ನೀಲವ್ವ ಮತ್ತು ಸಾವಮ್ಮ. ಸದರಿಯವರು ಜೀವಂತವಿರುತ್ತಾರೆ. ಸದರಿಯವರನ್ನು ಈ ಪ್ರಕರಣದಲ್ಲಿ ಪಕ್ಷಕಾರರನ್ನಾಗಿ ಮಾಡಿದ್ದೀರಾ ಎಂದರೆ ಗೊತ್ತಿಲ್ಲ. ಈರಪ್ಪನ ಹೆಂಡತಿಯ ಹೆಸರು ನಿಂಗಮ್ಮ. ಈರಪ್ಪ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಈರಪ್ಪ ಮತ್ತು ನಿಂಗಮ್ಮನಿಗೆ ಗಂಡು ಮಕ್ಕಳು ಇರಲಿಲ್ಲ ಎಂದರೆ ಸರಿ. ಆ ಕಾರಣ 8 ನೇ ಪ್ರತಿವಾದಿಯನ್ನು ನಿಂಗಮ್ಮ ದತ್ತಕ ಪಡೆದಿದ್ದರು ಎಂದರೆ ಸರಿ. ನಾನು ಬಿ ಎ ಓದಿರುತ್ತೇನೆ. ವಕೀಲರು ಸಾಕ್ಷಿಗೆ ದಾಖಲೆಯೊಂದನ್ನು ತೋರಿಸಿ ಸದರಿ ದಾಖಲೆ ದತ್ತಕ ಪತ್ರವಾಗಿದ್ದು, ನಕಲಿ ಪ್ರತಿಯಾದ ಕಾರಣ ನಿಶಾನೆಯಾಗಿ ಗುರುತಿಸಿಲ್ಲ. ದಿಃ 09-07-1951 ರಲ್ಲಿ ಸದರಿ ದತ್ತಕ ಪತ್ರ ನೋಂದಾವಣೆಯಾಗಿರುತ್ತದೆ ಎಂದರೆ ಸರಿ. ನಾನು ದಾವಾದಲ್ಲಿ 8 ನೇ ಪ್ರತಿವಾದಿ ದತ್ತಕ ತಂದೆ ಶಿವಪ್ಪ ದತ್ತಕ ತಂದೆ ಈರಪ್ಪ ರವದಿ ಎಂದು ಬರೆಸಿದ್ದೇನೆ ಎಂದರೆ ಸರಿ. ಮೂಲ ಪುರುಷ ಫಕೀರಪ್ಪ 80 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಚಿನ್ನಪ್ಪ ಮತ್ತು ಪರಪ್ಪ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ.

13. ಫಕೀರಪ್ಪ ತೀರಿಕೊಂಡ ನಂತರ ಅವರ ಮಕ್ಕಳು ನಡುವೆ ಕೂಡಿ ನಡೆಯಲಿಲ್ಲ ಎಂದರೆ ಸರಿಯಲ್ಲ. ಫಕೀರಪ್ಪ ಜೀವಂತವಿದ್ದಾಗ ಆತನ ಹೆಸರಿಗೆ ರಿಸ್ಸಾ ನಂಬರ 323 ಮತ್ತು 710 ಹೊಲಗಳು ಇದ್ದವು ಎಂದರೆ ಸರಿಯಲ್ಲ. ಬಹಳ ಇದ್ದವು ಎಂದು ನುಡಿಯುತ್ತಾರೆ. ಫಕೀರಪ್ಪ ತೀರಿಕೊಳ್ಳುವ ಮೊದಲು ಈರಪ್ಪ ತೀರಿಕೊಂಡಿದ್ದ ಎಂದರೆ ಸರಿಯಲ್ಲ. ಫಕೀರಪ್ಪ ಇದ್ದಾಗ ಆತನ ಹೆಸರಿನಲ್ಲಿ ಇದ್ದ ಜಮೀನುಗಳ ಸರ್ವೇ ನಂಬರ ಹೇಳಲಾಗುತ್ತದೆಯಾ ಎಂದರೆ ಹೇಳುತ್ತೇನೆ. ಅವುಗಳೆಂದರೆ, 118, 91/3, 33/ಅ ಮತ್ತು 8 ಇದ್ದವು. ಸದರಿ ಜಮೀನುಗಳು ಫಕೀರಪ್ಪನ

ಜಮೀನುಗಳಲ್ಲ. ಇತ್ತೀಚೆಗೆ ಖರೀದಿ ಮಾಡಿದ ಜಮೀನುಗಳು ಎಂದರೆ ಸರಿಯಲ್ಲ. ಸದರಿ ಜಮೀನುಗಳು ಫಕೀರಪ್ಪನಿಗೆ ಸಂಬಂಧಿಸಿದ ಜಮೀನುಗಳು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿದ್ದೀರಾ ಎಂದರೆ ಹಾಜರು ಪಡಿಸಿದ್ದೇನೆ. ನಿಪಿ. 1 ರಿಂದ 21 ರ ದಾಖಲೆಗಳಲ್ಲಿ ಸದರಿ ಜಮೀನಿನ ದಾಖಲೆಗಳು ಫಕೀರಪ್ಪನ ಹೆಸರಿನಲ್ಲಿಲ್ಲ ಎಂದರೆ ಸರಿ. ಫಕೀರಪ್ಪ, ಈರಪ್ಪ ಮತ್ತು ಶಿವಪ್ಪ ಮಾಡಿಕೊಂಡ ಆಫಸಾತ್ ವಾಟ್ನಿ ಡ ನಂಬರ 4494 ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿಕೊಂಡ ಕಾರಣ ನಿಡಿ. 4 ಎಂದು ಗುರುತಿಸಲಾಯಿತು. ಸದರಿ ದಾಖಲೆಗಳ ಪ್ರಕಾರ ಸಂಬಂಧಪಟ್ಟ ಡ ನಲ್ಲಿನ ಆಸ್ತಿಗಳು ಉತಾರದಲ್ಲಿ ನಮೂದಾಗಿದೆ ಎಂದರೆ ಸಾಕ್ಷಿ ಸುಮ್ಮನೆ ಇರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಃ ಸಮಯ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ